ಹಂಗಿಲ್ಲದ ಮಾತು. ತಾನು ಇದ್ದೇನೆ ಎನ್ನುವುದನ್ನು ತಿಳಿಸುವ ಅಗತ್ಯವಿಲ್ಲವಾಗಿ, ಆ ಅರ್ಥದಲ್ಲಿ ತನ್ನ ಹಂಗೂ ತನಗಿಲ್ಲದ ಮಾತು. ಕಾಡಿನಲ್ಲಿ ಅರಳಿರುವ ಹೂವಿನಂತೆ. ವನಸುಮ.

ಈ 'ವನಸುಮ' ಎಂಬ ಪದವೊಂದು ಅದ್ಭುತ!

ವ್ಯಕ್ತಿತ್ವದ ಮೇಲೆ ನಡೆಯುವ ಎಲ್ಲ ಬಗೆಯ 'ಹೇರಿಕೆ'ಗಳನ್ನೂ ಅದು ನಿರಾಕರಿಸುತ್ತದೆ. ನಿಸರ್ಗದ ಒಂದು 'ಸಿದ್ಧಿ' ಎಂಬಂತೆ ಇದೆ. ಯಾರೂ ನೋಡದೆ ಇದ್ದುದರಿಂದ ನಾನು ಹೀಗಿದ್ದೇನೆ ಎನ್ನುವಂತಿದೆ. ತೊಟ್ಟಿಲಲ್ಲಿ ಮಲಗಿರುವ ಕೂಸಿನ ನಗುವಿನಂತೆ.

ಕಾಳಿದಾಸ, ಶಾಕುಂತಲದಲ್ಲಿ – ಇನ್ನೂ ಯಾರೂ ಮೂಸದ ಹೂವಿನ ಗಂಧ, ಯಾರ ಬೆರಳ ತುದಿಯೂ ಸೋಕದ ಚಿಗುರು ಎಂದು, ಆಸ್ವಾದಿಸದ ರಸ ಎಂದು ಹೇಳುತ್ತಾನೆ.

ಈ ಎಲ್ಲ ಮಾತುಗಳ ಅರ್ಥವೇನೆಂದರೆ – ವನಸುಮದ ಕುರಿತು ಹೇಳುವುದಿದ್ದರೆ ಅದು ವನಸುಮವೇ ಪಿಸುನುಡಿಯಲ್ಲಿ ಹೇಳಿದಂತಿರಬೇಕು ಎನ್ನುವುದು ನನ್ನ ಇಷ್ಟ. ಇನ್ನೂ ಮುಗಿದಿಲ್ಲ. ಈಚೆಗೆ ನನಗೆ ಪರಿಚಿತರಾದ ಎಚ್.ಆರ್. ರಮೇಶ್, ಅವರ ಕೆಲವು ಪದ್ಯಗಳನ್ನು ನನಗೆ ಕಳಿಸಿದರು. 'ಪರಿಣಾಮ' ಎಂಬೊಂದು ಚಿಕ್ಕ ಪದ್ಯ. ಅದರ ಒಂದು ಸಾಲು ಹೀಗಿದೆ.

'ಹೇಳಲ್ಪಟ್ಟದ್ದು ಹೇಳಲ್ಪಡುವುದಕ್ಕಾಗಿ ಇರುವುದಿಲ್ಲ'.

ಮೊದಲ ಬಾರಿಗೆ ಈ ಸಾಲನ್ನು ಎದುರ್ಗೊಂಡಾಗ 'ಆಹಾ' ಎಂದು ಉದ್ಗರಿಸಿದ್ದೆ. ಈಗಲೂ ಉದ್ಗರಿಸುವೆ.

'ಅನ್ಯರೊರೆದುದನೆ ಬರೆದುದನೆ ಬರೆದು ಬಿನ್ನಗಾಗಿದೆ ಮನವು. ಬಗೆಯೊಳಗನೇ ತೆರೆದು ನನ್ನ

